ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಕರ್ನಾಟಕ ಕೃಷಿ ಇಲಾಖೆ

ಸಮಗ್ರ ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು-೬೫

ತುರುವೇಕೆರೆ ಹೋಬಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: **01.10.2013**

ಈ ವಾರದ ಮುನ್ಸೂಚನೆ (ದಿನಾಂಕ **02-10-13 to 02.10.13** ವರೆಗೆ)

ನಿಯತಾಂಕಗಳು	02.10.13	03.10.13	04.10.13	05.10.13	06.10.13
ಮಳೆ (ಮಿ ಮಿ)	0	0	0	2	1
ಗರಿಷ್ಠ ಉಷ್ಣಾಂಶ(ಡಿ.ಸೆ.)	29	29	29	30	30
ಕನಿಷ್ಠ ಉಷ್ಣಾಂಶ (ಡಿ.ಸೆ.)	18	17	17	17	17
ಮೋಡ (ಪ್ರಮಾಣ)	3	4	4	4	3
ಅರ್ದ್ರತೆ ೭.೨೦ ಬೆ (ಶೇ)	75	74	76	74	75
ಅರ್ದ್ರತೆ ೨.೨೦ ಮ (ಶೇ)	54	55	54	56	51
ಗಾಳಿಯ ವೇಗ (ಕಿ.ಮಿ/ಗಂಟೆಗೆ)	5	6	5	6	6
ಗಾಳಿಯ ದಿಕ್ಕು (ಡಿಗ್ರಿ)	270	260	240	220	230

ಈ ವಾರದ ಮುನ್ಸೂಚನೆಯ ಪ್ರಕಾರ ಮತ್ತು ಮುಂದಿನ ಐದು ದಿನಗಳ ಸಮೀಕ್ಷೆಯ ಪ್ರಕಾರ ಎಲ್ಲಾ ಐದು ದಿನಗಳಲ್ಲೂ ಭಾಗಶಃ ಮುಂಗಾರು ಕ್ಷೀಣಿಸಿದ್ದು, ಭಾಗಶಃ ಮೋಡ ಕವಿದ ವಾತಾವರಣವಿರುವ ಮುನ್ಸೂಚನೆಯಿದೆ. ಸ ದಿನದ ಗರಿಷ್ಠ ಉಷ್ಣಾಂಶ 29.0-30.0^{o}C ಮತ್ತು ಕನಿಷ್ಠ 17-18°C ಇರಲಿದೆ. ಬೆಳಗಿನ ಅರ್ದ್ರತೆ ಪ್ರಮಾಣ ಶೇ 74-76% ಇದ್ದು ಮಧ್ಯಾಹ್ನ 51-56 % ಇದ್ದು ಮತ್ತು ಗಾಳಿಯು ನೈರುತ್ಯ ದಿಕ್ಕಿನಿಂದ ಗಂಟೆಗೆ ಸರಾಸರಿ 5-6 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಮುಂಗಾರು ಕ್ಷೀಣಿಸಿದ್ದು, ರೈತರು ಕೃಷಿ ಚಟುವಟಿಕೆಗಳಾದ ಕಳೆ ತೆಗೆಯುವುದು, ಕುಂಟೆ ಹೊಡೆಯುವುದು ಇತ್ಯಾದಿ ಕೆಲಸಗಳನ್ನು ಮುಂದುವರೆಸಬಹುದು.
- ಬಿತ್ತನೆ ಮಾಡದ ಪ್ರದೇಶದಲ್ಲಿ ಸಾಕಷ್ಟು ತೇವಾಂಶವಿದ್ದಲ್ಲಿ ಅಲ್ಪಾವಧಿಯ ದ್ವಿದಳ ದಾನ್ಯ ಬೆಳೆಗಳ ತಳಿಗಳಾದ ಉದ್ದು (ರಶ್ಮಿ), ಅಲಸಂದೆ (ಟಿ.ವಿ.ಎಕ್ಸ್-944), ಅವರೆ (ಹೆಚ್,ಎ-3,4) ಮತ್ತು ಹುರಳಿ (ಕೆ,ಬಿ,ಹೆಚ್-1, ಪಿ,ಹೆಚ್,ಜಿ-9) ಬಿತ್ತನೆ ಮಾಡುವದು ಉತ್ತಮ.
- ರಾಗಿ ಮತ್ತು ಮುಸುಕಿನ ಜೋಳಕ್ಕೆ ಶಿಫಾರಸ್ಸು ಮಾಡಿದ ಸಾರಜನಕ ಮೇಲುಗೊಬ್ಬರ ಕೊಡಲು ಸೂಚಿಸಲಾಗಿದೆ
- ರಾಗಿಯಲ್ಲಿ ಬೆಂಕಿರೋಗ ಕಂಡುಬಂದಲ್ಲಿ ಬಾವಿಸ್ಟಿನ್ ಶಿಲಿಂದ್ರನಾಶಕವನ್ನು 1 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ ಮಳೆ ಇಲ್ಲದಿರುವಾಗ ಸಿಂಪಡಿಸಲು ಸೂಚಿಸಲಾಗಿದೆ.
- ನೆಲೆಗಡಲೆಗೆ ಪ್ರತಿ ಹೆಕ್ಟೇರ್‌ಗೆ 500 ಕಿ. ಗ್ರಾಂ. ಜಿಪ್ಸಂ ಉಪ್ಪನ್ನು ಸಾಲುಗಳ ಮಧ್ಯ ಹಾಕಿ ಬಿತ್ತನೆಯಾದ 40 ದಿವಸದಲ್ಲಿ ಮಧ್ಯಂತರ ಬೇಸಾಯ ಮಾಡಲು ಸೂಚಿಸಲಾಗಿದೆ.
- ಮುಸುಕಿನ ಜೋಳ, ತೊಗರಿ, ನೆಲೆಗಡಲೆ, ಹಾಗೂ ರಾಗಿ ಮುಂತಾದ ಬೆಳೆಗಳಲ್ಲಿ ಅಂತರ ಬೇಸಾಯ ಮಾಡಿ ಕಳೆಯನ್ನು ತೆಗೆಯಲು ಸೂಚಿಸಲಾಗಿದೆ.

ನೋಡಲ್ ಅಧಿಕಾರಿ:
ಡಾ.ಎಮ್.ಬಿ. ರಾಜೇಗೌಡ
ಬೆಂಗಳೂರು.